# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 796 (972) |
| ಸದಸ್ಯರ ಹೆಸರು | : | ಶ್ರೀ ಕಾಂತರಾಜ್ (ಬಿಎಂಎಲ್)<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 21-12-2021 |
| ಉತ್ತರಿಸುವ ಸಚಿವರು | : | ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಪಟ್ಟಣ ಪಂಚಾಯ್ತಿ ಮತ್ತು ಪುರಸಭೆಗಳಿಗೆ ಸರ್ಕಾರದಿಂದ ಅನುದಾನಗಳು ಸಮರ್ಪಕವಾಗಿ ಬಾರದಿರುವುದರಿಂದ ಸಾರ್ವಜನಿಕರಿಗೆ ಆಗಬೇಕಾದ ಕೆಲಸ-ಕಾರ್ಯಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ಸರ್ಕಾರದ ವಿವಿಧ ಯೋಜನೆಯಡಿ ನಗರಾಭಿವೃದ್ಧಿ ಇಲಾಖೆಗೆ ಲಭ್ಯವಿರುವ ಅನುದಾನದಿಂದ ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಿಗೆ ಯೋಜನೆಯ ಮಾರ್ಗಸೂಚಿಯಂತೆ ಕಾಲಕಾಲಕ್ಕೆ ಅನುದಾನ ಬಿಡುಗಡೆಗೊಳಸಲಾಗುತ್ತದೆ. ವಿವರ ಕೆಳಗಿನಂತಿವೆ.<br><br>1. **ಎಸ್.ಎಫ್.ಸಿ ಅನುದಾನ:**<br>2018-19 ರಿಂದ 2021 ನೇ ಸಾಲಿನವರೆಗೆ ಎಸ್.ಎಫ್.ಸಿ ಮುಕ್ತನಿಧಿ/ಎಸ್.ಎಫ್.ಸಿ ಕುಡಿಯವ ನೀರಿನ ಮತ್ತು ಎಸ್.ಎಫ್.ಸಿ ವಿಶೇಷ ಅನುದಾನ ಮಂಜೂರು ಮಾಡಲಾಗಿರುತ್ತದೆ.<br><br>2. **15ನೇ ಹಣಕಾಸು ಆಯೋಗದ ಅನುದಾನ:**<br>ಪಟ್ಟಣ ಪಂಚಾಯಿತಿಗಳು ಮತ್ತು ಪುರಸಭೆಗಳಿಗೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು 2020-21ನೇ ಸಾಲಿನಲ್ಲಿ ಒಟ್ಟು ಅನುದಾನ ರೂ.364.69 ಕೋಟಿ ಹಂಚಿಕೆ ಮಾಡಿ ಬಿಡುಗಡೆಗೊಳಸಲಾಗಿದೆ ಹಾಗೂ 2021-22ನೇ ಸಾಲಿನಲ್ಲಿ ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಿಗೆ ಒಟ್ಟು ಅನುದಾನ ರೂ.284.14 ಕೋಟಿ ಹಂಚಿಕೆ ಮಾಡಿ ಮೊದಲ ಕಂತಿನ ನಿರ್ಬಂದಿತ ಅನುದಾನ ಮತ್ತು ಮುಕ್ತ ಅನುದಾನ ಒಟ್ಟು ರೂ.142.07 ಕೋಟಿಗಳನ್ನು ಬಿಡುಗಡೆಗೊಳಸಲಾಗಿದೆ. ವಿವರಗಳನ್ನು **ಅನುಬಂಧ-1 ಮತ್ತು ಅನುಬಂಧ-2** ರಲ್ಲಿ ಲಗತ್ತಿಸಿದೆ.<br><br>15ನೇ ಹಣಕಾಸು ಆಯೋಗದ ಅನುದಾನದಡಿ 2020-21ನೇ ಸಾಲಿನ ಅನುದಾನವನ್ನು 2 ಭಾಗಗಳಾಗಿ ವಿಂಗಡಿಸಿದ್ದು, ಶೇ.50 ರಷ್ಟು ಅನುದಾನವು ನಿರ್ಬಂಧಿತ ಅನುದಾನವಾಗಿದ್ದು, ನಿರ್ಬಂಧಿತ ಅನುದಾನವನ್ನು ಸಮಾನವಾಗಿ ಕುಡಿಯುವ ನೀರು ಸರಬರಾಜು ಮತ್ತು ಘನತ್ಯಾಜ್ಯ ವಸ್ತು ನಿರ್ವಹಣೆಗಾಗಿ ಬಳಸಲು ಕಡ್ಡಾಯಗೊಳಸಿದೆ. ಉಳಿದ ಶೇ.50ರಷ್ಟು ಅನುದಾನ ಮುಕ್ತ (ಮೂಲ) ಅನುದಾನವಾಗಿದ್ದು, ಸದರಿ ಅನುದಾನವನ್ನು ನಗರ ಸ್ಥಳೀಯ ಸಂಸ್ಥೆಗಳ ಅವಶ್ಯಕತೆಗನುಗುಣವಾಗಿ ಇತರೆ |

| | | |
|---|---|---|
| | | ಮೂಲಭೂತ ಸೌಕರ್ಯಗಳಿಗೆ ಯಾವುದೇ ಒಂದು ವಲಯಕ್ಕೆ ಗರಿಷ್ಠ ಶೇ.20ರಷ್ಟು ಮೀರದಂತೆ ಬಳಸಲು ಮಾರ್ಗಸೂಚಿಯನ್ನು ನೀಡಲಾಗಿದೆ.<br><br>2021-22ನೇ ಸಾಲಿನ ಅನುದಾನವನ್ನು 2 ಭಾಗಗಳಾಗಿ ವಿಂಗಡಿಸಿದ್ದು, ಶೇ.60 ರಷ್ಟು ಅನುದಾನವು ನಿರ್ಬಂಧಿತ ಅನುದಾನವಾಗಿದ್ದು, ನಿರ್ಬಂಧಿತ ಅನುದಾನವನ್ನು ಸಮಾನವಾಗಿ ಕುಡಿಯುವ ನೀರು ಸರಬರಾಜು ಮತ್ತು ಘನತ್ಯಾಜ್ಯ ವಸ್ತು ನಿರ್ವಹಣೆಗಾಗಿ ಬಳಸಲು ಕಡ್ಡಾಯಗೊಳಿಸಿದೆ. ಉಳಿದ ಶೇ.40ರಷ್ಟು ಅನುದಾನ ಮುಕ್ತ (ಮೂಲ) ಅನುದಾನವಾಗಿದ್ದು, ಸದರಿ ಅನುದಾನವನ್ನು ನಗರ ಸ್ಥಳೀಯ ಸಂಸ್ಥೆಗಳ ಅವಶ್ಯಕತೆಗನುಗುಣವಾಗಿ ಇತರೆ ಮೂಲಭೂತ ಸೌಕರ್ಯಗಳಿಗೆ ಬಳಸಲು ಮಾರ್ಗಸೂಚಿಯನ್ನು ನೀಡಲಾಗಿದೆ.<br><br>3. **ಸ್ವಚ್ಛ ಭಾರತ ಅಭಿಯಾನ**:<br>ಸ್ವಚ್ಛ ಭಾರತ ಯೋಜನೆಯಡಿ ಅಭಿವೃದ್ಧಿ ಕಾಮಗಾರಿಗಳಾದ ವೈಯಕ್ತಿಕ ಶೌಚಾಲಯಗಳ ನಿರ್ಮಾಣ, ಸಮುದಾಯ/ ಸಾರ್ವಜನಿಕ ಶೌಚಾಲಯಗಳ ನಿರ್ಮಾಣ, ಐ.ಇ.ಸಿ ಮತ್ತು ಘನತ್ಯಾಜ್ಯ ವಸ್ತು ನಿರ್ವಹಣೆ ಕಾಮಗಾರಿಗಳಿಗೆ ಎಸ್. ಬಿ.ಎಂ ಮಾರ್ಗಸೂಚಿಗಳ್ವಯ ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನ ಬಿಡುಗಡೆ ಮಾಡಲಾಗುತ್ತಿರುತ್ತದೆ. ಸ್ವಚ್ಛ ಭಾರತ ಯೋಜನೆಯಡಿ ಪಟ್ಟಣ ಪಂಚಾಯತಿ ಮತ್ತು ಪುರಸಭೆಗಳಿಗೆ ರೂ.288.75 ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ. |
| ಆ) | ಪುರಸಭೆ ಮತ್ತು ಪಟ್ಟಣ ಪಂಚಾಯ್ತಿಗಳಿಗೆ ಸರ್ಕಾರವು ಬಿಡುಗಡೆ ಮಾಡುತ್ತಿರುವ ಅನುದಾನಗಳು ಯಾವುವು; ಕಳೆದ 3 ವರ್ಷಗಳಿಂದ ತುಮಕೂರು ಜಿಲ್ಲಾ ವ್ಯಾಪ್ತಿಯ ಪುರಸಭೆ ಮತ್ತು ಪಟ್ಟಣ ಪಂಚಾಯ್ತಿಗಳಿಗೆ ಬಿಡುಗಡೆ ಮಾಡಿರುವ ಅನುದಾನವೆಷ್ಟು? (ವರ್ಷವಾರು ವಿವರವಾದ ಮಾಹಿತಿ ನೀಡುವುದು) | ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಿಗೆ ಸರ್ಕಾರವು ಬಿಡುಗಡೆ ಮಾಡುತ್ತಿರುವ ಅನುದಾನಗಳ ವಿವರಗಳು ಈ ಕೆಳಕಂಡಂತಿವೆ:<br>1. ಎಸ್.ಎಫ್.ಸಿ ಮುಕ್ತನಿಧಿ ಅನುದಾನ<br>2. ಎಸ್.ಎಫ್.ಸಿ ಕುಡಿಯುವ ನೀರಿನ ಅನುದಾನ<br>3. ಎಸ್.ಎಫ್.ಸಿ ವಿಶೇಷ ಅನುದಾನ<br>4. 14ನೇ ಹಣಕಾಸು ಆಯೋಗದ ಅನುದಾನ (2018-19 /2019-20)<br>5. 15ನೇ ಹಣಕಾಸು ಆಯೋಗದ ಅನುದಾನ (2020-21)<br>6. ನಗರೋತ್ಥಾನ ಹಂತ -3 )ಮುನಿಸಿಪಾಲಿಟಿ<br>7. ಸ್ವಚ್ಛ ಭಾರತ ಅಭಿಯಾನ<br><br>1. **ಎಸ್.ಎಫ್.ಸಿ ಅನುದಾನ**:<br>ಪುರಸಭೆ ಮತ್ತು ಪಟ್ಟಣ ಪಂಚಾಯ್ತಿಗಳಿಗೆ ಎಸ್.ಎಫ್.ಸಿ ಮುಕ್ತನಿಧಿ /ಎಸ್.ಎಫ್.ಸಿ ಕುಡಿಯವ ನೀರಿನ ಅನುದಾನ ಮತ್ತು ಎಸ್.ಎಫ್.ಸಿ ವಿಶೇಷ ಅನುದಾನದಡಿ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ. ಬಿಡುಗಡೆಯಾದ ಅನುದಾನದ ವಿವರವನ್ನು **ಅನುಬಂಧ**-1 ರಲ್ಲಿ ಲಗತ್ತಿಸಿದೆ. |

| | | |
|---|---|---|
| | | **2. 14ನೇ ಹಣಕಾಸು ಆಯೋಗದ ಅನುದಾನ:**(2018-19 /2019-20)<br>ತುಮಕೂರು ಜಿಲ್ಲೆಯ ಪುರಸಭೆ, ಪಟ್ಟಣ ಪಂಚಾಯಿತಿಗಳಿಗೆ 14ನೇ ಹಣಕಾಸು ಆಯೋಗದ ಅನುದಾನದಡಿ ಬಿಡುಗಡೆಗೊಳಿಸಿರುವ ಅನುದಾನದ ವಿವರಗಳನ್ನು **ಅನುಬಂಧ -2**ರಲ್ಲಿ ಲಗತ್ತಿಸಿದೆ.<br><br>**3. 15ನೇ ಹಣಕಾಸು ಆಯೋಗದ ಅನುದಾನ: (2021-22)**<br>ತುಮಕೂರು ಜಿಲ್ಲೆಯ ಪುರಸಭೆ, ಪಟ್ಟಣ ಪಂಚಾಯಿತಿಗಳಿಗೆ 15ನೇ ಹಣಕಾಸು ಆಯೋಗದ ಅನುದಾನದಡಿ ಬಿಡುಗಡೆಗೊಳಿಸಿರುವ ಅನುದಾನದ ವಿವರಗಳನ್ನು **ಅನುಬಂಧ -2**ರಲ್ಲಿ ಲಗತ್ತಿಸಿದೆ.<br><br>**4. ನಗರೋತ್ಥಾನ ಹಂತ -3 )ಮುನಿಸಿಪಾಲಿಟಿ**<br>ಪುರಸಭೆ ಮತ್ತು ಪಟ್ಟಣ ಪಂಚಾಯತಿಗಳಿಗೆ ನಗರೋತ್ಥಾನ ಹಂತ-3ರ ಯೋಜನೆಯಡಿಯಲ್ಲಿ ಅನುದಾನ ಬಿಡುಗಡೆ ಮಾಡಲಾಗಿದೆ.<br><br>ತುಮಕೂರು ಜಿಲ್ಲಾ ವ್ಯಾಪ್ತಿಯ ಪುರಸಭೆ ಮತ್ತು ಪಟ್ಟಣ ಪಂಚಾಯತಿಗಳಿಗೆ ಬಿಡುಗಡೆ ಮಾಡಿರುವ ಅನುದಾನದ ವಿವರಗಳನ್ನು **ಅನುಬಂಧ-3**ರಲ್ಲಿ ನೀಡಿದೆ.<br><br>**5. ಸ್ವಚ್ಛ ಭಾರತ ಅಭಿಯಾನ:**<br>ಸ್ವಚ್ಛ ಭಾರತ ಯೋಜನೆಯಡಿ ವೈಯಕ್ತಿಕ ಶೌಚಾಲಯಗಳ ನಿರ್ಮಾಣ, ಸಮುದಾಯ ಮತ್ತು ಸಾರ್ವಜನಿಕ ಶೌಚಾಲಯಗಳ ನಿರ್ಮಾಣ, ಐ.ಇ.ಸಿ ಮತ್ತು ಘನತ್ಯಾಜ್ಯ ವಸ್ತು ನಿರ್ವಹಣೆ ಕಾಮಗಾರಿಗಳಿಗೆ ಎಲ್ಲಾ ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಿಗೆ ಅನುದಾನ ಬಿಡುಗಡೆ ಮಾಡಲಾಗುತ್ತದೆ. ಕಳೆದ ಮೂರು ವರ್ಷಗಳಿಂದ ತುಮಕೂರು ಜಿಲ್ಲಾ ವ್ಯಾಪ್ತಿಯ ಪುಗಸಭೆ ಮತ್ತು ಪಟ್ಟಣ ಪಂಚಾಯಿತಿಗಳಿಗೆ ಬಿಡುಗಡೆ ಮಾಡಲಾದ ಅನುದಾನದ ವಿವರಗಳನ್ನು **ಅನುಬಂಧ-4**ರಲ್ಲಿ ಲಗತ್ತಿಸಿದೆ. |
| ಇ) | ಗುಬ್ಬಿ ಪಟ್ಟಣ ಪಂಚಾಯ್ತಿಗೆ ಕಳೆದ 3 ವರ್ಷಗಳಿಂದ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ; ಬಾಕಿ ಇರುವುದು ಎಷ್ಟು; ಅಭಿವೃದ್ಧಿಗಾಗಿ ಇನ್ನೂ ಬಿಡುಗಡೆ ಮಾಡಬೇಕಾಗಿರುವುದು ಎಷ್ಟು; ಯಾವ ಕಾಲಮಿತಿಯಲ್ಲಿ ಬಿಡುಗಡೆ ಮಾಡಲಾಗುವುದು; (ವಿವರವಾದ ಮಾಹಿತಿ ನೀಡುವುದು) | **1. ಎಸ್.ಎಫ್.ಸಿ ಅನುದಾನ:**<br>ಗುಬ್ಬಿ ಪಟ್ಟಣ ಪಂಚಾಯ್ತಿಗೆ 2018-19 ರಿಂದ 2020-21 ನೇ ಸಾಲಿನವರೆಗೆ ಎಸ್.ಎಫ್.ಸಿ ಮುಕ್ತನಿಧಿ/ಎಸ್.ಎಫ್.ಸಿ ಕುಡಿಯುವ ನೀರಿನ ಅನುದಾನದಡಿ ಬಿಡುಗಡೆ ಮಾಡಲಾಗಿರುವ ಅನುದಾನದ ವಿವರವನ್ನು ಬಿಡುಗಡೆಗೊಳಿಸಲು ಬಾಕಿ ಇರುವ ಅನುದಾನದ ವಿವರಗಳನ್ನು **ಅನುಬಂಧ-5**ರಲ್ಲಿ ಲಗತ್ತಿಸಿದೆ.<br><br>**2. 14 ಮತ್ತು 15ನೇ ಹಣಕಾಸಿನ ಆಯೋಗದ ಅನುದಾನ:**<br>ಗುಬ್ಬಿ ಪಟ್ಟಣ ಪಂಚಾಯಿತಿಗೆ ಕಳೆದ 3 ವರ್ಷಗಳಲ್ಲಿ 14 ನೇ ಮತ್ತು 15ನೇ ಹಣಕಾಸು ಆಯೋಗದ ಅನುದಾನದಡಿ ಬಿಡುಗಡೆ ಮಾಡಿರುವ ಅನುದಾನ ರೂ.313.47 ಲಕ್ಷಗಳು ವಿವರಗಳು ಈ ಕೆಳಕಂಡಂತಿದೆ. |

| ಯೋಜನೆ | 14ನೇ ಹಣಕಾಸಿನ ಆಯೋಗದ ಅನುದಾನ | | 15ನೇ ಹಣಕಾಸಿನ ಆಯೋಗದ ಅನುದಾನ | ಒಟ್ಟು |
|---|---|---|---|---|
| ಸಾಲು | 2018-19 | 2019-20 | 2020-21 | |
| ಮೊತ್ತ | 85.40 | 114.07 | 114.00 | 313.47 |

14ನೇ ಮತ್ತು 15ನೇ ಹಣಕಾಸು ಆಯೋಗದ ಅನುದಾನದಡಿಯಲ್ಲಿ ಗುಬ್ಬಿ ಪಟ್ಟಣ ಪಂಚಾಯಿತಿಗಳಗೆ ಬಿಡುಗಡೆಗೊಳಸಲು ಅನುದಾನ ಬಾಕಿ ಇರುವುದಿಲ್ಲ.

3. **ಸ್ವಚ್ಛ ಭಾರತಅಭಿಯಾನ:**

ಸ್ವಚ್ಛ ಭಾರತ ಯೋಜನೆಯಡಿ ಗುಬ್ಬಿ ಪಟ್ಟಣ ಪಂಚಾಯಿತಿಗೆ ಬಿಡುಗಡೆ ಮಾಡಲಾದ ಮತ್ತು ಬಿಡುಗಡೆಗೆ ಬಾಕಿ ಇರುವ ಅನುದಾನದ ವಿವರಗಳು ಈ ಕೆಳಕಂಡಂತ್ತಿದೆ.

(ರೂ.ಲಕ್ಷಗಳಲ್ಲಿ)

| ವರ್ಷ | ಬಿಡುಗಡೆಯಾದ ಅನುದಾನ | ಬಿಡುಗಡೆಗೆ ಬಾಕಿ ಅನುದಾನ |
|---|---|---|
| 2018-19 | 14.73 | 31.17 |
| 2019-20 | 0.00 | |
| 2020-21 | 2.50 | |
| ಒಟ್ಟು | **17.23** | **31.17** |

4. **ನಗರೋತ್ಥಾನ ಹಂತ -3 (ಮುನಿಸಿಪಾಲಿಟಿ)**

ಗುಬ್ಬಿ ಪಟ್ಟಣ ಪಂಚಾಯತಿಗೆ ನಗರೋತ್ಥಾನ ಹಂತ- 3 ರ ಯೋಜನೆಯಡಿಯಲ್ಲಿ ರೂ.189.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಬಿಡುಗಡೆಗೆ ಬಾಕಿ ಇರುವ ಅನುದಾನ ರೂ.11.00 ಲಕ್ಷಗಳು.

---

ಈ) ಗುಬ್ಬಿ ಪಟ್ಟಣ ಪಂಚಾಯ್ತಿಯಲ್ಲಿ ಯು.ಜಿ.ಡಿ ಮತ್ತು ಎಸ್.ಟಿ.ಪಿ ಕಾಮಗಾರಿಗಳು ಯಾವ ಹಂತದಲ್ಲಿದೆ; ಮುಕ್ತಾಯ ಗೊಳ್ಳದಿರಲು ಕಾರಣಗಳೇನು? ಯಾವ ಕಾಲಮಿತಿಯಲ್ಲಿ ಮುಕ್ತಾಯಗೊಳಸಿ ಸಾರ್ವಜನಿಕರಿಗೆ ಸೌಲಭ್ಯ ಒದಗಿಸಲಾಗುವುದು?

ಗುಬ್ಬಿ ಪಟ್ಟಣಕ್ಕೆ ಒಳಚರಂಡಿ ಯೋಜನೆಯನ್ನು ಅನುಷ್ಠಾನಗೊಳಸಲು ರೂ.1794.50 ಲಕ್ಷಗಳ ಅಂದಾಜಿಗೆ ಆದೇಶ ಸಂಖ್ಯೆ: ನಅಇ 19 ಯು.ಡಿ.ಎಸ್ 2012, ದಿನಾಂಕ: 25/08/2012ರಲ್ಲಿ ಅನುಮೋದನೆ ನೀಡಲಾಗಿರುತ್ತದೆ.

ಸದರಿ ಯೋಜನೆಯಡಿ 57.21 ಕಿ.ಮೀ. ಆಂತರಿಕ ಕೊಳವೆಮಾರ್ಗ, 2463 ಸಂಖ್ಯೆ ಮೆಷಿನ್ ಹೋಲ್ ನಿರ್ಮಾಣ ಮತ್ತು 1033 ಸಂಖ್ಯೆ ಗೃಹಸಂಪರ್ಕ ಕಲ್ಪಿಸುವ ಕಾಮಗಾರಿಗಳನ್ನು ಪೂರ್ಣಗೊಳಸಲಾಗಿದೆ.

ಇಲ್ಲಿಯವರೆಗೂ ವೆಟ್‌ವೆಲ್ ಮತ್ತು 2.90 ಎಂ.ಎಲ್.ಡಿ. ಸಾಮರ್ಥ್ಯದ ಎಸ್.ಟಿ.ಪಿ. ಘಟಕ ನಿರ್ಮಿಸಲು ಗುಬ್ಬಿ ಪಟ್ಟಣ ಪಂಚಾಯ್ತಿಯಿಂದ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಗೆ ಜಮೀನು ಹಸ್ತಾಂತರಿಸದೇ ಇರುವುದರಿಂದ, 9 ವರ್ಷಗಳ ಅವಧಿಯಲ್ಲಿ ಸಾಮಗ್ರಿಗಳ ದರ ಹೆಚ್ಚಳದಿಂದಾಗಿ ಹಾಗೂ ಆಂತರಿಕ ಕೊಳವೆಮಾರ್ಗದ

| | | |
|---|---|---|
| | | ಕಾಮಗಾರಿಯ ಮೊತ್ತವು ಅನುಮೋದಿತ ಅಂದಾಜು ಮೊತ್ತಕ್ಕಿಂತ ಹೆಚ್ಚಾಗಿರುವುದರಿಂದ, ವೆಟ್‌ವೆಲ್ ಹಾಗೂ ಎಸ್.ಟಿ.ಪಿ. ಘಟಕ ಕಾಮಗಾರಿಯನ್ನು ಕೈಗೊಳ್ಳಲು ಪರಿಷ್ಕೃತ ಅಂದಾಜು ಪಟ್ಟಿಯನ್ನು ರೂ. 2928.00 ಲಕ್ಷಗಳಿಗೆ ತಯಾರಿಸಿ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. ಎಸ್.ಟಿ.ಪಿ ಹಾಗೂ ಇತರೆ ಘಟಕಗಳ ಜಮೀನನ್ನು ಗುಬ್ಬಿ ಪಟ್ಟಣ ಪಂಚಾಯ್ತಿಯವರು ಮಂಡಳಿಗೆ ಹಸ್ತಾಂತರಿಸಿದ ನಂತರ, ಎಸ್.ಟಿ.ಪಿ ಹಾಗೂ ಇತರೆ ಘಟಕಗಳ ಕಾಮಗಾರಿಯನ್ನು ಕೈಗೊಂಡು ಸುಮಾರು 18 ತಿಂಗಳೊಳಗೆ ಮುಕ್ತಾಯಗೊಳಿಸಿ ಸಾರ್ವಜನಿಕರಿಗೆ ಸೌಲಭ್ಯ ಒದಗಿಸಲಾಗುವುದು. |

ಕಡತ ಸಂಖ್ಯೆ:ನಅಇ 523 ಎಸ್.ಎಫ್.ಸಿ 2021

[ಎನ್. ನಾಗರಾಜ್ (ಎಂ.ಟಿ.ಬಿ)]
ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆಗಳು ಹಾಗೂ
ಸಾರ್ವಜನಿಕ ವಲಯ ಉದ್ಯಮಗಳ ಸಚಿವರು

ಅನುಬಂಧ -01

# ABSTRACT REPORT

## SFC UNTIED PROGRAMME

Rs. in Lakhs

| SL.NO | District | Name Of the Town | ULB Type | YEAR | Grants Allocation | Grants Released |
|---|---|---|---|---|---|---|
| 1 | Tumakuru | Chikkanayakanahalli | TMC | 2018-19 | 139.78 | 113.5 |
| 2 | Tumakuru | Gubbi | TP | 2018-19 | 76.92 | 62.25 |
| 3 | Tumakuru | Huliyar | TP | 2018-19 | 0 | 0 |
| 4 | Tumakuru | Koratagere | TP | 2018-19 | 64.73 | 52.5 |
| 5 | Tumakuru | Kunigal | TMC | 2018-19 | 125.71 | 97.79 |
| 6 | Tumakuru | Madhugiri | TMC | 2018-19 | 128.52 | 104.5 |
| 7 | Tumakuru | Pavagada | TMC | 2018-19 | 134.15 | 108.5 |
| 8 | Tumakuru | Turuvekere | TP | 2018-19 | 60.98 | 49.25 |
| | | | | **TOTAL** | **730.79** | **588.29** |
| 1 | Tumakuru | Chikkanayakanahalli | TMC | 2019-20 | 120 | 120 |
| 2 | Tumakuru | Gubbi | TP | 2019-20 | 66 | 66 |
| 3 | Tumakuru | Huliyar | TP | 2019-20 | 103 | 77.25 |
| 4 | Tumakuru | Koratagere | TP | 2019-20 | 55 | 55 |
| 5 | Tumakuru | Kunigal | TMC | 2019-20 | 108 | 108 |
| 6 | Tumakuru | Madhugiri | TMC | 2019-20 | 111 | 91 |
| 7 | Tumakuru | Pavagada | TMC | 2019-20 | 116 | 116 |
| 8 | Tumakuru | Turuvekere | TP | 2019-20 | 53 | 53 |
| | | | | **TOTAL** | **732** | **686.25** |
| 1 | Tumakuru | Chikkanayakanahalli | TMC | 2020-21 | 44.55 | 44.55 |
| 2 | Tumakuru | Gubbi | TP | 2020-21 | 24.52 | 24.52 |
| 3 | Tumakuru | Huliyar | TP | 2020-21 | 37.97 | 37.97 |
| 4 | Tumakuru | Koratagere | TP | 2020-21 | 20.33 | 20.33 |
| 5 | Tumakuru | Kunigal | TMC | 2020-21 | 40.06 | 40.06 |
| 6 | Tumakuru | Madhugiri | TMC | 2020-21 | 28.86 | 28.86 |
| 7 | Tumakuru | Pavagada | TMC | 2020-21 | 42.76 | 42.76 |
| 8 | Tumakuru | Turuvekere | TP | 2020-21 | 19.43 | 19.43 |
| | | | | **TOTAL** | **258.48** | **258.48** |

## ABSTRACT REPORT

## SFC Drinking Water PROGRAMME

Rs. in Lakhs

| SL.NO | District | Name Of the Town | ULB Type | YEAR | Grants Allocation | Grants Released |
|---|---|---|---|---|---|---|
| 1 | Tumakuru | Chikkanayakanahalli | TMC | 2018-19 | 30 | 30 |
| 2 | Tumakuru | Gubbi | TP | 2018-19 | 5 | 5 |
| 3 | Tumakuru | Koratagere | TP | 2018-19 | 20 | 20 |
| 4 | Tumakuru | Kunigal | TMC | 2018-19 | 10 | 10 |
| 5 | Tumakuru | Madhugiri | TMC | 2018-19 | 30 | 30 |
| 6 | Tumakuru | Pavagada | TMC | 2018-19 | 45 | 45 |
| 7 | Tumakuru | Turuvekere | TP | 2018-19 | 20 | 20 |
| | | | | **TOTAL** | **160** | **160** |
| 1 | Tumakuru | Chikkanayakanahalli | TMC | 2019-20 | 26 | 26 |
| 2 | Tumakuru | Gubbi | TP | 2019-20 | 10 | 10 |
| 3 | Tumakuru | Koratagere | TP | 2019-20 | 22 | 22 |
| 4 | Tumakuru | Kunigal | TMC | 2019-20 | 10 | 10 |
| 5 | Tumakuru | Madhugiri | TMC | 2019-20 | 26 | 26 |
| 6 | Tumakuru | Pavagada | TMC | 2019-20 | 26 | 26 |
| 7 | Tumakuru | Turuvekere | TP | 2019-20 | 22 | 22 |
| | | | | **TOTAL** | **142** | **142** |
| 1 | Tumakuru | Chikkanayakanahalli | TMC | 2020-21 | 7.5 | 7.5 |
| 2 | Tumakuru | Gubbi | TP | 2020-21 | 5 | 5 |
| 3 | Tumakuru | Koratagere | TP | 2020-21 | 5 | 5 |
| 4 | Tumakuru | Kunigal | TMC | 2020-21 | 7.5 | 7.5 |
| 5 | Tumakuru | Madhugiri | TMC | 2020-21 | 7.5 | 7.5 |
| 6 | Tumakuru | Pavagada | TMC | 2020-21 | 7.5 | 7.5 |
| 7 | Tumakuru | Turuvekere | TP | 2020-21 | 5 | 5 |
| | | | | **TOTAL** | **45** | **45** |

| ABSTRACT REPORT | | | | | | |
|---|---|---|---|---|---|---|
| SFC Special Grants PROGRAMME | | | | | | |
| | | | | | Rs. In Lakhs | |
| 1 | 2 | 3 | 4 | 5 | 6 | 7 |
| SL.NO | District | Name Of the Town | ULB Type | YEAR | Grants Allocation | Grants Released |
| 1 | Tumakuru | Chikkanayakanahalli | TMC | 2019-20 | 300 | 0 |
| 2 | Tumakuru | Huliyar | TP | 2019-20 | 300 | 150 |
| 3 | Tumakuru | Turuvekere | TP | 2019-20 | 100 | 100 |
| | | | | Total | 700 | 250 |

CHIEF PROJECT OFFICER
Urban Poverty Alleviation Management Unit
Directorate of Municipal Administration
Bangalore

ಅನುಬಂಧ-02

## ABSTRACT REPORT

### SFC UNTIED PROGRAMME

Rs. In Lakhs

| SL.NO | District | Name Of the Town | ULB Type | YEAR | Grants Allocation | Grants Released | Balance yet to be Release |
|---|---|---|---|---|---|---|---|
| 2 | Tumakuru | Gubbi | TP | 2018-19 | 76.92 | 62.25 | 14.67 |
| 2 | Tumakuru | Gubbi | TP | 2019-20 | 66 | 66 | 0 |
| 2 | Tumakuru | Gubbi | TP | 2020-21 | 24.52 | 24.52 | 0 |
| | | | | TOTAL | 167.44 | 152.77 | 14.67 |

### SFC Drinking Water PROGRAMME

Rs. in Lakhs

| SL.NO | District | Name Of the Town | ULB Type | YEAR | Grants Allocation | Grants Released | Balance yet to be Release |
|---|---|---|---|---|---|---|---|
| 2 | Tumakuru | Gubbi | TP | 2018-19 | 5 | 5 | 0 |
| 2 | Tumakuru | Gubbi | TP | 2019-20 | 10 | 10 | 0 |
| 2 | Tumakuru | Gubbi | TP | 2020-21 | 5 | 5 | 0 |
| | | | | TOTAL | 20 | 20 | 0 |

CHIEF PROJECT OFFICER
Urban Poverty Alleviation Management Unit
Directorate of Municipal Administration
Bangalore

Annexure-2.

**Details of Grants Allocation, Releases made to TMCs/TPs of Tumkuru District during last 3 years (14th FC and 15th FC - 2018-19, 2019-20 and 2020-21)**

| Date=01-12-2021 | | | | | | | Rs. in Lakhs | |
|---|---|---|---|---|---|---|---|---|
| **District** | **Name Of the Town** | **ULB Type** | **Grants Allocation** | **Grants Released** | **Grants Allocation** | **Grants Released** | **Grants Allocation** | **Grants Released** |
| | | | | | | | | |
| | | | **14th FC 2018-19** | | **14th FC 2019-20** | | **15th FC 2020-21** | |
| Tumakuru | Kunigal | TMC | 139.47 | 139.46 | 188.00 | 188.11 | 189.00 | 189.00 |
| Tumakuru | Madhugiri | TMC | 142.59 | 142.58 | 191.00 | 191.11 | 190.00 | 190.00 |
| Tumakuru | Pavagada | TMC | 148.83 | 148.82 | 201.00 | 201.12 | 200.00 | 200.00 |
| Tumakuru | Turuvekere | TP | 67.72 | 67.72 | 91.00 | 91.05 | 89.00 | 89.00 |
| Tumakuru | Chikkanayakanahalli | TMC | 155.07 | 155.06 | 208.00 | 208.12 | 209.00 | 209.00 |
| Tumakuru | Gubbi | TP | 85.40 | 85.40 | 114.00 | 114.07 | 114.00 | 114.00 |
| Tumakuru | Huliyar | TP | 0.00 | 0.00 | 179.00 | 179.10 | 159.00 | 159.00 |
| Tumakuru | Koratagere | TP | 71.88 | 71.88 | 96.00 | 96.06 | 99.00 | 99.00 |
| | | **Total** | **810.96** | **810.92** | **1268.00** | **1268.74** | **1249.00** | **1249.00** |

ಅನುಬಂಧ - 3

# ನಗರೋತ್ಥಾನ (ಮುನಿಸಿಪಾಲಿಟಿ)–3ನೇ ಹಂತದ ಯೋಜನೆ

(ರೂ. ಲಕ್ಷಗಳಲ್ಲಿ)

| ಕ್ರ. ಸಂ. | ಜಿಲ್ಲೆಯ ಹೆಸರು | ನಗರ ಸ್ಥಳೀಯ ಸಂಸ್ಥೆಗಳ ಹೆಸರು | ವರ್ಗ | ಹಂಚಿಕೆ | 2018–19 | | 2019–20 | | 2020–21 | |
|---|---|---|---|---|---|---|---|---|---|---|
| | | | | | ಬಿಡುಗಡೆ | ಖರ್ಚು | ಬಿಡುಗಡೆ | ಖರ್ಚು | ಬಿಡುಗಡೆ | ಖರ್ಚು |
| 1 | ತುಮಕೂರು | ಕುಣಿಗಲ್ | ಪುರಸಭೆ | 750.00 | 219.00 | 219.00 | 268.00 | 268.00 | 100.00 | 100.00 |
| 2 | | ಚಿಕ್ಕನಾಯಕನಹಳ್ಳಿ | ಪುರಸಭೆ | 750.00 | 238.00 | 238.00 | 75.00 | 75.00 | 289.00 | 289.00 |
| 3 | | ಪಾವಗಡ | ಪುರಸಭೆ | 750.00 | 126.00 | 126.00 | 348.00 | 348.00 | 113.00 | 113.00 |
| 4 | | ಮಧುಗಿರಿ | ಪುರಸಭೆ | 750.00 | 365.00 | 365.00 | 68.00 | 68.00 | 175.00 | 175.00 |
| 5 | | ಗುಬ್ಬಿ | ಪಟ್ಟಣ ಪಂಚಾಯಿತಿ | 200.00 | 109.00 | 109.00 | 80.00 | 80.00 | 0.00 | 0.00 |
| 6 | | ಕೊರಟಗೆರೆ | ಪಟ್ಟಣ ಪಂಚಾಯಿತಿ | 200.00 | 26.00 | 26.00 | 40.00 | 40.00 | 123.00 | 123.00 |
| 7 | | ತುರುವೇಕರೆ | ಪಟ್ಟಣ ಪಂಚಾಯಿತಿ | 200.00 | 25.00 | 25.00 | 70.00 | 70.00 | 0.00 | 0.00 |
| | | **ಒಟ್ಟು** | | **3600.00** | **1108.00** | **1108.00** | **949.00** | **949.00** | **800.00** | **800.00** |

ಮುಖ್ಯ ಅಭಿಯಂತರರು
ಪೌರಾಡಳಿತ ನಿರ್ದೇಶನಾಲಯ
ಬೆಂಗಳೂರು

ಅನುಬಂಧ-೬

| Annexure-1 for 972(796) (Rs in Lakhs) | | | | | |
|---|---|---|---|---|---|
| Sl. No. | District Name | ULB type | 2018-19 | 2019-20 | 2020-21 |
| | Tumkur Dist | | | | |
| 1 | Kunigal | TMC | 48.20 | 0.00 | 5.00 |
| 2 | Madhugiri | TMC | 0.00 | 0.00 | 5.00 |
| 3 | Pavagada | TMC | 5.33 | 0.00 | 5.00 |
| 4 | Chiknayakanhalli | TMC | 31.93 | 0.00 | 5.00 |
| 5 | Gubbi | TP | 14.73 | 0.00 | 29.58 |
| 6 | Koratagere | TP | 5.73 | 1.73 | 4.29 |
| 7 | Turuvekere | TP | 0.00 | 0.00 | 2.50 |
| | Huliyaru | TP | 0.00 | 0.00 | 2.50 |
| | Total | | 105.93 | 1.73 | 58.87 |

Geetha M.C
(MIS Specialist)

Sneholatha
Executive Engineer
Directorate of Municipal Administration
Bangalore.